ದಿನಾಂಕಃ21-11-2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಎಸ್.ಜಿ.ಕೆ ವಕೀಲರಿಂದಃ**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

ವಾದಿ ಸಂಸ್ಥೆಗಳು ಸಾಕ್ಷಿದಾರರಿಗೆ ಪ್ರಕರಣ ನಡೆಸಲು ನೀಡಿರುವ ರೆಜಲೂಷನ್ ನ ದೃಢೀಕೃತ ಪ್ರತಿಯನ್ನು ಪ್ರತಿವಾದಿ ಪರ ವಕೀಲರ ತಕ್ರಾರಿಗೆ ಒಳಪಟ್ಟು ನಿಪಿ-1 ಎಂದು ಗುರುತಿಸಲಾಯಿತು. ದಿನಾಂಕ 17-08-2016 ರ ದೃಢೀಕರಿಸಿದ ಅಗ್ರೀಮೆಂಟ್ ಆಫ್ ಸೆಲ್ ಅನ್ನು ಪ್ರತಿವಾದಿ ಪರ ವಕೀಲರ ತಕ್ರಾರಿಗೆ ಒಳಪಟ್ಟು ನಿಪಿ-2 ಎಂದು ಗುರುತಿಸಲಾಯಿತು. ದಿನಾಂಕ 17-08-2016 ರ ದೃಢೀಕರಿಸಿದ ಜಿಪಿಎ ಅನ್ನು ಪ್ರತಿವಾದಿ ಪರ ವಕೀಲರ ತಕ್ರಾರಿಗೆ ಒಳಪಟ್ಟು ನಿಪಿ-3 ಎಂದು ಗುರುತಿಸಲಾಯಿತು. ದಿನಾಂಕ 18-11-2019 ರ ದೃಢೀಕರಿಸಿದ ಕ್ರಯಪತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು. ದಿನಾಂಕ 08-06-2020 ರ ವಕೀಲರ ನೋಟಿಸಿನ ಕಚೇರಿಯ ಪ್ರತಿಯನ್ನು ನಿಪಿ-5 ಎಂದು ಗುರುತಿಸಲಾಯಿತು. 4 ಅಂಚೆ

ರಶೀದಿಗಳನ್ನು ನಿಪಿ-6 ರಿಂದ ನಿಪಿ-9 ಎಂದು ಗುರುತಿಸಲಾಯಿತು. ವಾಪಸ್ಸಾದ 3 ಅಂಚೆ ಲಕೋಟೆಗಳನ್ನು ನಿಪಿ-10 ರಿಂದ ನಿಪಿ-12 ಎಂದು ಗುರುತಿಸಲಾಯಿತು. 1 ಅಂಚೆ ಸ್ವೀಕೃತಿಯನ್ನು ನಿಪಿ-13 ಎಂದು ಗುರುತಿಸಲಾಯಿತು. ಸರ್ವೆ ನಂಬರ 87/*/ಅ ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನಿಪಿ-14 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.